

‘ಯಾನ’ ಚಿತ್ರದ ಒಂದು ದೃಶ್ಯ



ನಟಿ, ನಿರ್ದೇಶಕಿ ವಿಜಯಲಕ್ಷ್ಮಿ ಸಿಂಗ್

ನಿರ್ದೇಶಕರು ಸಿಗುವುದಕ್ಕೆ 2–3 ವರ್ಷ ಹಿಡೀತು. ಅಲ್ಲೂ ಒಂದು ತಮಾಷೆ ನಡೆಯಿತು. ‘ಕಡೆಗೂ ನಿರ್ಮಾಪಕರೊಬ್ಬರು ಸಿಕ್ಕಿದರು. ತೇಜಸ್ವಿಯವರ ಕಥೆಯಾದ್ದರಿಂದ ಅವರೂ ಉತ್ಸಾಹದಿಂದ ಮುಂದೆ ಬಂದರು. ನಾನೇ ಹೋಗಿ ಕಥೆಯ ಹಕ್ಕುಗಳನ್ನು ತೆಗೆದುಕೊಂಡು ಬಂದೆ. ಇನ್ನೇನು ಚಿತ್ರಕಥೆ ಎಲ್ಲ ಮುಗಿದ ಬಳಿಕ ಆ ನಿರ್ಮಾಪಕರು ಹಿಂಜರಿದರು. ಕಾರಣ ಕೇಳಿದರೆ – ಮೇಡಂ, ನಮ್ಮ ಮತ್ತು ನಿಮ್ಮ ಜಾತಕ ಕೂಡಿ ಬರುವುದಿಲ್ಲ ಎಂದು ನಮ್ಮ ಜ್ಯೋತಿಷಿ ಹೇಳಿದ್ದಾರೆ– ಎಂದರು’ ಎಂದು ನಗುತ್ತಾರೆ ಸುಮನ್. ಆ ಬಳಿಕ ನಿರ್ಮಾಪಕ ರವೀಂದ್ರ ಅವರು ಮುಂದೆ ಬಂದದ್ದರಿಂದ ಆ ಚಿತ್ರ ಹೊರಬಂತು ಎಂದೂ ಸುಮನ್ ನೆನಪಿಸಿಕೊಳ್ಳುತ್ತಾರೆ.

ಒಂದು ಮಾತಂತೂ ನಿಜ. ಮಹಿಳೆಯರು ಯಾವುದೇ ಸಿನಿಮಾವನ್ನು ಮಾಡುವುದಿದ್ದರೂ ಹೆಚ್ಚು ಸೆನ್ಸಿಟಿವ್ ಆಗಿ, ಮಹಿಳಾಪರ ದೃಷ್ಟಿಕೋನದಿಂದ ಮಾಡುತ್ತಾರೆ. ಉದಾಹರಣೆಗೆ ಕವಿತಾ ನಿರ್ದೇಶನದ ‘ಪ್ರೀತಿ ಪ್ರೇಮ ಪ್ರಣಯ’ ಚಿತ್ರದಲ್ಲಿ ಅನಂತನಾಗ್ ಪ್ರಮುಖ ಪಾತ್ರದಲ್ಲಿದ್ದರೂ, ಭಾರತಿ ಅವರ ಪಾತ್ರಕ್ಕೂ ಅಷ್ಟೇ ಪ್ರಾಮುಖ್ಯತೆ ಇದೆ. ಹಾಗೆಂದು ಕನ್ನಡದಲ್ಲಿ ಈ ತರಹದ ಮಹಿಳಾ ಸೆನ್ಸಿಟಿವ್ ದೃಷ್ಟಿಕೋನದಿಂದ ವಸ್ತುವನ್ನು ಗ್ರಹಿಸುವ ನಿರ್ದೇಶಕರು ಇಲ್ಲವೆಂದಲ್ಲ. ಕವಿತಾ ಅವರು ಈ ನಿಟ್ಟಿನಲ್ಲಿ ಗಿರೀಶ್ ಕಾಸರವಳ್ಳಿ ಅವರನ್ನು ನೆನಪಿಸಿಕೊಳ್ಳುತ್ತಾರೆ. ‘ಗಿರೀಶ್ ಅವರ ಬಹುತೇಕ ಚಿತ್ರಗಳಲ್ಲಿ ಹೆಣ್ಣು ಪಾತ್ರಗಳು ಅತ್ಯಂತ ಸಶಕ್ತವಾಗಿ ಬಂದಿವೆ. ಆದರೆ ಎಲ್ಲರಿಗೂ ಆ ತರಹದ ಆರೋಗ್ಯಕರ ದೃಷ್ಟಿಕೋನ ಇರಲ್ಲ.’ ಎನ್ನುತ್ತಾರೆ ಅವರು.

ಕಳೆದ 18 ವರ್ಷಗಳಲ್ಲಿ 10 ಸಿನಿಮಾಗಳನ್ನು ಮಾಡಿ, ಇವತ್ತು ಕನ್ನಡ ಚಿತ್ರೋದ್ಯಮದಲ್ಲಿ ಪ್ರಮುಖ ನಿರ್ದೇಶಕಿಯಾಗಿರುವ ಕವಿತಾ ಆರಂಭದಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸಿದ್ದಾರೆ. ‘ನನ್ನನ್ನು ಡೈರೆಕ್ಟರ್ ಥರಾ ನೋಡ್ತಾನೇ ಇರಲಿಲ್ಲ. ಮೊದಲ ಸಿನಿಮಾ ಅಲ್ಲ, ಪ್ರತಿಯೊಂದು ಸಿನಿಮಾಕ್ಕೂ ನನ್ನನ್ನು ನಾನು ಪ್ರೂವ್ ಮಾಡುತ್ತಲೇ ಇರಬೇಕು ಅಂದರೆ ಹೇಗೆ? ನನ್ನ ಅಪ್ಪ (ಪಿ.ಲಂಕೇಶ್) ನನಗೆ ಹಣದ ಲೆಕ್ಕಾಚಾರವನ್ನು ಸರಿಯಾಗಿ ಕಲಿಸಿಕೊಟ್ಟಿದ್ದರಿಂದ ನಾನು ನನ್ನ ಸಿನಿಮಾ ಮಾಡುವಾಗ ನಿರ್ಮಾಪಕರ ಹಿತಾಸಕ್ತಿಯತ್ತ ಮೊದಲು ಗಮನ ಹರಿಸುತ್ತಿದ್ದೆ. ಈವರೆಗೆ ನಾನು ಮಾಡಿರುವ ಯಾವ ಸಿನಿಮಾದಲ್ಲೂ ನಿರ್ಮಾಪಕರಿಗೆ ನಷ್ಟ ಆಗಿಲ್ಲ. ಕೋಟಿಗಟ್ಟಳೆ ಹಣ ಬಂದಿಲ್ಲದಿರಬಹುದು; ಆದರೆ ಲಾಭವಂತೂ ಆಗಿದೆ’ ಎನ್ನುತ್ತಾರೆ ಕವಿತಾ.

ಈ ಅನುಭವ ಸುಮನ್ ಕಿತ್ತೂರು ಅವರಿಗೂ ಆಗಿದೆ. ‘ಪುರುಷನೊಬ್ಬ ನಿರ್ದೇಶಕನಾಗಿ ಮೊದಲ ಸಿನಿಮಾ ಮಾಡಿದರೂ ಸಾಕು, ಚಿತ್ರದ ಸಿಬ್ಬಂದಿ ಕೈಕಟ್ಟಿ ಅವನ ಮುಂದೆ ನಿಂತು ವಿಧೇಯತೆಯಿಂದ ಕೇಳಿಸಿಕೊಳ್ಳುತ್ತಾರೆ. ಆದರೆ ಹೆಣ್ಣುಮಗಳು ನಿರ್ದೇಶಕಿ ಅಂದರೆ ಒಂಥರಾ ನಿರ್ಲಕ್ಷ್ಯದ ಧೋರಣೆ. ಹಿಂದಿನ ದಿನ 2–3 ಸಲ ನೆನಪಿಸಿದ ಬಳಿಕವೂ ಮರುದಿನ ಶೂಟಿಂಗ್ ಸ್ಪಾಟ್ ತಲುಪಿದಾಗ ಯಾವುದೋ ಒಂದು ಪ್ರಾಪರ್ಟಿ ತಂದಿರುವುದಿಲ್ಲ. ನಿರ್ದೇಶಕನಾದರೆ ಬಾಯಿಗೆ ಬಂದಂತೆ ಬೈಯ್ಯುತ್ತಾನೆ. ನಾವು ಹೆಣ್ಣುಮಕ್ಕಳು

## ಮಹಿಳಾ ತಂತ್ರಜ್ಞರು ಬೇಕು..



‘ಕನ್ನಡ ಉದ್ಯಮದಲ್ಲಿ ಟೆಕ್ನಿಕಲ್ ವಿಭಾಗದಲ್ಲಿ ಮಹಿಳೆಯರ ಸಂಖ್ಯೆ ಜಾಸ್ತಿ ಆಗುತ್ತಿಲ್ಲ. ಛಾಯಾಗ್ರಹಣ, ಸಂಕಲನ, ಅಸೋಸಿಯೇಟ್ ಡೈರೆಕ್ಷನ್ ಕೆಲಸದಲ್ಲಿ ಯಾರೂ ಕಾಣುತ್ತಿಲ್ಲ. ನಟಿಯರು ಬರುತ್ತಿದ್ದಾರೆ. ಚಿತ್ರಕಥಾ ಲೇಖಕಿ ಬಹಳ ಸುಲಭದ ಕೆಲಸ. ಮನೇಲೇ ಕೂತು ಬರೆಯಬಹುದು. ಅದೂ ಆಗುತ್ತಿಲ್ಲ. ನಿರ್ದೇಶಕಿಯರು ಒಂದು 10–15 ಮಹಿಳೆಯರಾದರೂ ಸಿಗಬಹುದು. ಆದರೆ ತಂತ್ರಜ್ಞರಿಲ್ಲ. ದಕ್ಷಿಣ ಭಾರತದ ಇತರ ಭಾಷೆಗಳಲ್ಲಿ ಹೇರಳವಾಗಿದ್ದಾರೆ. ಬೀನಾ ಪೌಲ್ ಮಲಯಾಳಂನ ಪ್ರಮುಖ ಸಂಕಲನಕಾರ್ತಿ ಆಗಿದ್ದರು. ಆಮೇಲೆ ಡೈರೆಕ್ಟರ್ ಆದರು. ಹಿಂದಿಯಲ್ಲಿ ದೊಡ್ಡ ಹೆಸರು ಮಾಡಿದ ನಿರ್ದೇಶಕಿಯರಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲೂ ಓದುವವರಿಲ್ಲ. ಮುಖ್ಯವಾಗಿ ಚಲನಚಿತ್ರ ಅಕಾಡೆಮಿ ಇಂತಹ ಕೆಲಸಗಳನ್ನು ಮಾಡಬೇಕು. ಚೇಂಬರ್ ಮಾಡುವ ಕೆಲಸವಲ್ಲ ಇದು. ಆದರೆ ಅಕಾಡೆಮಿಯವರು ಚೇಂಬರ್ ಮಾಡುವ ಕೆಲಸವನ್ನೇ ರಿಪೀಟ್ ಮಾಡುತ್ತಿದ್ದಾರೆ. ಪ್ರಶಸ್ತಿ ಕೊಡೋದು ಅಕಾಡೆಮಿ ಕೆಲಸ ಅಲ್ಲ. ಸಿನಿಮಾದ ಕ್ವಾಲಿಟಿ ಹೆಚ್ಚು ಮಾಡುವ ಬಗ್ಗೆ ವಿಚಾರ ಮಾಡಬೇಕು. ತಮಿಳಿನಲ್ಲೂ ಛಾಯಾಗ್ರಾಹಕಿಯರಿದ್ದಾರೆ.